ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Saturday the 22nd July 1978. Ashada 31, 1900 S. E.

The House met in the Assembly Chamber, Vidhana Soudha at Nine of the Clock.

[MR. SPEAKER (SRI P. VENKATARAMANA) in the Chair]

STARRED QUESTIONS

(to which oral answers were given)

MR. SPEAKER.—Question No. 5 of Sri R. Gangadharan is held over.

Construction of bridges in Halekote—Doddakuncha Road in Holenarasipur Taluk.

68. SRI H. D. DEVEGOWDA (Holenarasipur).—Will the Minister for Public Works be pleased to state :

(*a*) whether it is not a fact that construction of two Bridges (near Kyathanahalli and the other near Doddakuncha) on 1st K. M. and 13th K. M. in Halekote—Doddakuncha Road in Holenarasipur Taluk has been sanctioned by the Karnataka Bridge Corporation;

(*b*) if so, what is the cost of each bridge,

(*c*) whether Government intends to take steps to complete these two bridges without any delay ?

SRI S. BANGARAPPA (Minister for Public Works).—

(*a*) Construction of bridges on 1st and 13th K. M. of Halekote—Doddakuncha Road has not been sanctioned so far.

There is no Corporation by name the Karnataka Bridge Corporation.

(*b*) and (*c*) Does not arise in view of reply to clause (a) above.

ಶ್ರೀ ಎಚ್. ಡಿ. ದೇವೇಗೌಡ.—ಈ ಎರಡು ಸೇತುವೆಗಳನ್ನು ಕಟ್ಟುವುದಕ್ಕೆ ಅಂದಾಜು ಪತ್ರಿಕೆಗಳು ಸಿದ್ಧವಿವೆಯೇ ಎಂತಲಾ ಅವುಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿದ್ದಾಗಿದೆಯೇ ?

† ಶ್ರೀ ಎಸ್. ಬಂಗಾರಪ್ಪ.—ಮುಂಜೂರಾತಿಗಾಗಿ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಎರಡನೇ ಕಲೋಮೀಟರ್ ಹತ್ತಿರ ಕಟ್ಟುವ ಸೇತುವೆಗೆ ೧.೨೫ ಲಕ್ಷ ಆಗಬಹುದು, ಮತ್ತು ಮೂನೇ ಕಲೋಮೀಟರ್ ಹತ್ತಿರ ಕಟ್ಟುವ ಸೇತುವೆಗೆ ಒಂದು ಲಕ್ಷ ಆಗಬಹುದು. ಈ ಎರಡು ಸ್ಥಳಗಳಲ್ಲಿ ಹೈ—ಲೆವಲ್ ಕಾಸ್ ವೇ ಮಾಡಬೇಕಾಗುತ್ತದೆಂಬ ವಿಚಾರ ಈ ಇಲಾಖೆಯಲ್ಲಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಎರಡನ್ನು ಮುಂಜೂರಾತಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಕೊಳ್ಳುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ.—ಈ ಎರಡು ಸ್ಥಳಗಳಲ್ಲಿ ಹೈಲೆವಲ್ ಕಾಸ್‌ವೇ ಮಾಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಮಾನ್ಯ ದೇವೇಗೌಡರು ಇಂದಿನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆಂದು ನಾನು ತಿಳಿದ್ದು ಕೊಂಡಿದ್ದೇನೆ. ಹಣ ಜಾಸ್ತಿ ಸಿಕ್ಕಿದ ತಕ್ಷಣ ಈ ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕಿದೆ.

Collection of Road Taxes by Bijapur Agriculture Produce Marketing Co-operative Society.

238. SRI B. S. PATIL (Huvinhipparigi).—Will the Minister of State for Regulated Markets be pleased to state :—

(*a*) whether the Agricultural Produce Marketing Committee, Bijapur is collecting road tax from the ryots at one per cent on the sales and the amount of tax so collected by the said Committee so far during the last 3 years ;

(*b*) the purpose for which the said amount has been utilised ?

SRI R. S. PATIL (Minister for Labour and Excise) [on behalf of SRI A. B. JAKANUR (Minister of State for Regulated Markets)].—

(*a*) Road tax is not being collected on the sale of agricultural produce. The agricultural produce marketing Committee is collecting a Marketing fee from the sellers at one per cent on the sale amount and they have collected a sum of Rs. 48,93,260-23 so far (upto 31-3-1978) during the last three years.

(*b*) The amount so collected has been credited to the Karnataka Roads and Bridges Fund as per Section 65 of the Karnataka Agricultural Produce Marketing (Control) Act. The said fund is being spent for the construction, development, repair and maintenance of the rural roads in the State.

ಶ್ರೀ ಬಿ.ಎಸ್. ಪಾಟೀಲ್.—ಮಾರಾಟವಾದ ವ್ಯವಸಾಯೋತ್ಪನ್ನದ ಮೇಲೆ ರೋಡ್ ಟ್ಯಾಕ್ಸ್‌ನ್ನು ಸಂಗ್ರಹ ಮಾಡಲಾಗುತ್ತಿಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ. ಈ ಹಿಂದೆ ಮಾನ್ಯ ಚೆನ್ನಬಸಪ್ಪ ನವರು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದಾಗ ಒಂದು ಹೇಳಿಕೆಯನ್ನು ಈ ಬಗ್ಗೆ ಕೊಟ್ಟಿದ್ದರು. ಏನೆಂದರೆ, ಆಯಾ ಮಾರ್ಕೆಟ್‌ಗಳ ಸರಹದ್ದಿನಲ್ಲಿ ಸಂಗ್ರಹ ಮಾಡತಕ್ಕಂತಹ ಹಣವನ್ನು ಆಯಾ ಮಾರ್ಕೆಟ್‌ಗಳ ಸುತ್ತಮುತ್ತ ಇರತಕ್ಕಂಥ ಹಳ್ಳಿಗಳಿಗೆ ಅಂದರೆ, ಹಳ್ಳಿಗಳಿಂದ ಮಾರ್ಕೆಟ್‌ಗೆ

† Indicate that remarks or speeches have not been revised by the member Concerned.